**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ., ರವರ ನ್ಯಾಯಾಲಯ, ನಂಜನಗೂಡು**

**ಸಿ.ಸಿಃ 480/2014**

| | | |
|---|---|---|
| ಸಾಕ್ಷಿದಾರರ ಹೆಸರು | **ವೆಂಕಟೇಶ** | **ಫ್ರಾಸಾಃ 01** |
| ತಂದೆಯ/ಗಂಡನ ಹೆಸರು | ಸುಂದ್ರಪ್ಪ | **ಚಾಸಾಃ 01** |
| ವಯಸ್ಸು | 63 ವರ್ಷ | ದಿಃ 21.07.2026 ರಂದು |
| ಕೆಲಸ | ವ್ಯವಸಾಯ | ಸಾಕ್ಷಿಯನ್ನು ಕರೆಯಿಸಿ ಪ್ರಮಾಣ |
| ವಾಸ | ದಾಸನೂರು ಗ್ರಾಮ | ವಚನ ಬೋಧಿಸಲಾಯಿತು. |

**ಮುಖ್ಯ ವಿಚಾರಣೆ ಫ್ರಾಜ್ಞ ಸ.ಸ.ಅ ರವರಿಂದಃ**

ಚಾಸಾ 2 ನನ್ನ ತಾಯಿ, ಚಾಸಾ 3 ರಿಂದ 6 ರವರ ಪರಿಚಯ ಇದೆ. ದಿಃ 12.09.2013 ರಂದು ಬೆಳಿಗ್ಗೆ 7 – 8 ಗಂಟೆ ಸಮಯದಲ್ಲಿ ನಮ್ಮ ದೇವಸ್ಥಾನದ ಪೂಜೆ ನನ್ನ ತಮ್ಮ ವಿಜಯ್ ಮಾಡುತ್ತಿದ್ದು, ಆರೋಪಿಗಳು ದೇವಸ್ಥಾನ ಬಳಿ ಬಂದು ನಾವೇ ಪೂಜೆ ಮಾಡಬೇಕು ನೀವು ಆಚೆ ಬನ್ನಿ ಎಂದು ಗಲಾಟೆ ಮಾಡಿರುತ್ತಾರೆ. ಆ ಸಮಯದಲ್ಲಿ ನಾನು ನನ್ನ ತಮ್ಮ ವಿಜೇಂದ್ರ, ಶ್ರೀಧರ ಮತ್ತು ಗೋವಿಂದರಾಜು ಅದು ಸಾಧ್ಯವಿಲ್ಲ ಎಂದು ತಿಳಿಸಿರುತ್ತೇವೆ. ದೇವಸ್ಥಾನದಿಂದ ಆಚೆ ಬಂದು ಆರೋಪಿಗಳು ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ. ದೇವಸ್ಥಾನದ ಪಕ್ಕದಲ್ಲಿ ನಮ್ಮ ಮನೆಯಿದ್ದು, ಮನೆಯಲ್ಲಿ ನಮ್ಮ ತಾಯಿ ಚಾಸಾ 2 ಇದ್ದು, ಆರೋಪಿ 2 ನಮ್ಮ ಮನೆಗೆ ಹೋಗಿ ಬಾಗಿಲನ್ನು ಒದ್ದು ಗಲಾಟೆ ಮಾಡಿರುತ್ತಾರೆ. ಎಲ್ಲಾ ಆರೋಪಿಗಳು ನಮ್ಮನ್ನು ಬೋಳಿ ಮಕ್ಕಳೇ, ಸೂಳೆ ಮಕ್ಕಳೇ ಎಂದು ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ. ನಮ್ಮ ತಾಯಿ ತಡೆಯಲು ಬಂದಾಗ ಅವರನ್ನು ತಳ್ಳಿ ಅವರ ಭುಜಕ್ಕೆ ಗಾಯವನ್ನುಂಟು ಮಾಡಿರುತ್ತಾರೆ. ನಂತರ ನಾನು ಪೊಲೀಸ್ ಠಾಣೆಗೆ ಹೋಗಿ ಆರೋಪಿಗಳ ವಿರುದ್ಧ ದೂರು ದಾಖಲಿಸಿರುತ್ತೇನೆ.

ಸಾಕ್ಷಿ ದೂರಿನಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿ.ಪಿ. 1 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ. 1(ಎ) ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಸಾಕ್ಷಿಯು ಭಾಗಶಃ ಪ್ರತಿಕೂಲ ಸಾಕ್ಷಿ ನುಡಿಯುತ್ತಿದ್ದಾರೆ. ಮಾನ್ಯ ಎ.ಪಿ.ಪಿ.ಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ಪ್ರಾಜ್ಞ ಸ.ಸ.ಅ ರವರಿಂದಃ**

ವಿವಾದಿತ ಘಟನೆಯು ಶ್ರೀ ವೆಂಕಟರಮಣ ದೇವಸ್ಥಾನದಲ್ಲಿ ನಡೆದಿರುತ್ತದೆ ಎಂದರೆ ಸರಿ. ಸದರಿ ದಿನ ನಾನೇ ಪೂಜೆ ಮಾಡುತ್ತಿದ್ದ ಎಂದರೆ ಸರಿಯಲ್ಲ. ಆರೋಪಿಗಳು ನನ್ನನ್ನುದ್ದೇಶಿಸಿ ಗುಂಪು ಕಟ್ಟಿಕೊಂಡು ಬಂದು ಪೂಜೆ ಮಾಡಬೇಡಿ ಎಂದು ಹೇಳಿ ಗಲಾಟೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ದೇವಸ್ಥಾನ ಬೀಗ ಹಾಕಲು ಹೋದಾಗ ಆರೋಪಿಗಳು ಏಕಾಏಕಿ ಬಂದು ನಮ್ಮನ್ನು ತಡೆದು ತಳ್ಳಿ ಗಲಾಟೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಆಗ ಗಲಾಟೆಯನ್ನು ಬಿಡಿಸಲು ಬಂದ ಚಾಸಾ 2 ರವರನ್ನು ಕೆಳಗೆ ತಳ್ಳಿ ಮೈ ಕೈ ಗೆ ಹೊಡೆದು ಗಲಾಟೆ ಮಾಡಿರುತ್ತಾರೆ ಎಂದರೆ ಸರಿ. ಆ ಸಮಯದಲ್ಲಿ ಚಾಸಾ 2 ರವರಿಗೆ ಎಡಭುಜ ಹಾಗೂ ಎಡಮೊಣಕೈ ಗೆ ಪೆಟ್ಟಾಗಿರುತ್ತದೆ ಎಂದರೆ ಸರಿ.

**ಪಾಟೀ ಸವಾಲುಃ** ಆರೋಪಿ ಪರ ವಕೀಲರು ಸಮಯಾವಕಾಶ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.

**ಮರುವಿಚಾರಣೆಃ ಇಲ್ಲ**

ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

**ಓ.ಹೇ.ಕೇ.ಸ.ಇದೆ.ಎಂ.ಒ**

1 **ನೇ ಹೆಚ್ಚುವರಿ ಸಿ.ಜೆ ಮತ್ತು ಜೆ.ಎಂ.ಎಫ್.ಸಿ**

**ನ್ಯಾಯಾಲಯ, ನಂಜನಗೂಡು**